1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ
ನ್ಯಾಯಾಲಯ, ಕುಂದಾಪುರ.

**ಸಿ.ಸಿ. ನಂಬ್ರ: 967/2026**

ಪಿರ್ಯಾದಿದಾರರು: ಸರ್ಕಾರದ ಪರವಾಗಿ ಕುಂದಾಪುರ ಸಂಚಾರಿ ಠಾಣಾ ಪೊಲೀಸರು

- ಮತ್ತು -

ಆರೋಪಿ: ಹುನೈಫ್ ಮಾಶೂಕ್, 29 ವರ್ಷ,
ತಂದೆ: ಮಹಮ್ಮದ್ ಹುಸೇನ್,
ವಾಸ: ರಶೀದ್ ಮಂಜಿಲ್ ಸಿಪಿಸಿ
ಕಾಂಪೌಂಡ್, ಕುದ್ರೋಳಿ ಮಂಗಳೂರು
ದಕ್ಷಿಣ ಕನ್ನಡ ಜಿಲ್ಲೆ.

:ಆಪಾದನೆಯ ಸಾರಾಂಶ:

ದಿ. 29.03.2026 ರಂದು ಸಂಜೆ ಕುಂದಾಪುರ ತಾಲೂಕು ರಾ.ಹೆ. 66 ರ -ಬೈಂದೂರು- ಉಡುಪಿ ಏಕಮುಖ ರಸ್ತೆಯಲ್ಲಿ ಆರೋಪಿತರಾದ ನೀವು Toyota Company Etios ಬಾಡಿಗೆ ಕಾರು ನಂಬ್ರ KA 51 D 3520 ನೇದನ್ನು ಚಲಾಯಿಸಿಕೊಂಡು ಕುಂದಾಪುರ ಕಡೆಯಿಂದ ಉಡುಪಿ ಕಡೆಗೆ ಹೊರಟಿದ್ದು ಸಂಜೆ 5.55 ಗಂಟೆಗೆ ಕುಂಭಾಶಿ ಗ್ರಾಮದ ಕುಂಭಾಶಿ ಜಂಕ್ಷನ್ ಹತ್ತಿರ ಕುಂಭಾಶಿ ಮುಖ ಮಂಟಪದಿಂದ ಹಿಂದೆ ತಲುಪುವಷ್ಟರಲ್ಲಿ ಬೀಜಾಡಿ ಕಡೆಯಿಂದ ಕುಂಭಾಶಿ ಕಡೆಗೆ ಸೈಕಲ್ ಸವಾರಿ ಮಾಡಿಕೊಂಡು ಹೋಗುತ್ತಿದ್ದ ಚಾಸಾ-1 ನೇಯವರಿಗೆ ಡಿಕ್ಕಿ ಹೊಡೆದ ಪರಿಣಾಮ ಚಾಸಾ-1 ನೇಯವರು ಸೈಕಲ್ ಸಮೇತ ರಸ್ತೆಗೆ ಬಿದ್ದ ಪರಿಣಾಮ ಚಾಸಾ-1 ನೇಯವರಿಗೆ ತೀವ್ರ ಸ್ವರೂಪದ ಗಾಯವಾಗಿರುತ್ತದೆ. ಆ ಮೂಲಕ ಆರೋಪಿತರಾದ ನೀವು ಕಲಂ 281, 125(ಬಿ) ಬಿಎನ್‌ಎಸ್ ರೀತ್ಯಾ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಆಪಾದನೆ ಇರುತ್ತದೆ.

ಪ್ರಶ್ನೆ-1ಃ ಈ ಅಪರಾಧದ ಬಗ್ಗೆ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರ:

(ದಿನಾಂಕ: 08 ನೇ ಜುಲೈ 2026 ರಂದು ಆಪಾದಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ಮೇಲಿನ ಆರೋಪವನ್ನು ಓದಿ ಹೇಳಿ ವಿವರಿಸಿ ಉತ್ತರ ಪಡೆದುಕೊಳ್ಳಲಾಗಿದೆ ಎಂಬುದಾಗಿ ದೃಢೀಕರಿಸುತ್ತೇನೆ)

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಕುಂದಾಪುರ.